ಕರ್ನಾಟಕ ಸರ್ಕಾರ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಜನಸ್ಪಂದನ ಕೋಶ)

ಸಂಖ್ಯೆ: ಸಿಆಸುಇ: 199:ಆರ್‌ಟಿಐ:2010

3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಗೋಪುರ,
ಬೆಂಗಳೂರು, ದಿನಾಂಕ: 29.11.2010

## ಸುತ್ತೋಲೆ

ವಿಷಯ : ಮಾಹಿತಿ ಹಕ್ಕು ಅಧಿನಿಯಮ 2005 ರಡಿ ಅರ್ಜಿದಾರರು ಕೇಳುವ ಮಾಹಿತಿಗಳಿಗೆ ರೂ.10/-ರ ಪೋಸ್ಟಲ್ ಆರ್ಡರ್ ಹಾಕುತ್ತಿರುವುದನ್ನು ರಾಜ್ಯ ಸರ್ಕಾರದ ಕಛೇರಿಗಳು ನಗಧೀಕರಿಸದೇ ಇರುವ ಬಗ್ಗೆ.

ಉಲ್ಲೇಖ : ಮಾನ್ಯ ಮುಖ್ಯಮಂತ್ರಿಯವರ ಸಚಿವಾಲಯದ ಟಿಪ್ಪಣಿ ಸಂಖ್ಯೆ : ಸಿಎಂ/329/ಆರ್‌ಟಿಐ/2010, ದಿನಾಂಕ : 08.11.2010

***

ಸಾರ್ವಜನಿಕ ಮಾಹಿತಿ ಅಧಿಕಾರಿಗಳು, ಸಾರ್ವಜನಿಕರು ಮಾಹಿತಿ ಕೋರಿ ಸಲ್ಲಿಸುವ ಅರ್ಜಿಗಳೊಂದಿಗೆ ಸ್ವೀಕರಿಸುವ ರೂ. 10/- ರ ಪೋಸ್ಟಲ್ ಆರ್ಡರ್‌ನ್ನು ನಗದೀಕರಿಸದೆ ಕಡತದಲ್ಲಿ ಉಳಿಸಿಕೊಂಡಿರುವುದನ್ನು ದಿ: 08.11.2010 ರಂದು ಒಂದು ಪ್ರಕರಣದ ಸಂದರ್ಭದಲ್ಲಿ ಕರ್ನಾಟಕ ಮಾಹಿತಿ ಆಯೋಗವು ಗಮನಿಸಿದೆ. ಪೋಸ್ಟಲ್ ಆರ್ಡರ್‌ಗಳನ್ನು ನಗದೀಕರಿಸಿ ಸರ್ಕಾರಕ್ಕೆ ಜಮಾ ಮಾಡುವುದು ಕಟ್ಟು ನಿಟ್ಟಿನ ವಿಷಯವಾಗಿದೆ. ಆದ್ದರಿಂದ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ತಮ್ಮ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳ / ಇಲಾಖಾ ಮುಖ್ಯಸ್ಥರ / ನಿಗಮ(ಮಂಡಳಿ) ಅನುದಾನಿತ ಸಂಘ ಸಂಸ್ಥೆಗಳು ಹಾಗೂ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳ / ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ / ಮೊದಲ ಮೇಲ್ಮನವಿ ಪ್ರಾಧಿಕಾರಿಗಳಿಗೆ ಸೂಚಿಸುವಂತೆ ತಿಳಿಸಿದೆ.

ಲ. ವೆಂಕಟಗಿರಿಯಪ್ಪ 29/11/10
(ಲ.ವೆಂಕಟಗಿರಿಯಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿಗಳು,
ಸಿಆಸುಇ (ಜನಸ್ಪಂದನ ಕೋಶ- ಮಾಹಿತಿ ಹಕ್ಕು)

ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು

ಪ್ರತಿ:
ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.